**ದಿನಾಂಕ - 05-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಪ್ರತಿವಾದಿ ನಂಬ್ರ.1, 3 ರಿಂದ 5, 9, 11 ಹಾಗೂ 17 ರವರ ಪರ ವಕೀಲರು ತಮ್ಮ ಪಾಟೀ ಸವಾಲನ್ನು ನಂತರ ಪೂರ್ಣಗೊಳಿಸುವುದಾಗಿ ಕಾಲಾವಕಾಶ ಕೋರಿದ್ದು. ಪ್ರತಿವಾದಿ ನಂಬ್ರ.12 ರವರ ಪರ ವಕೀಲರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ 12 ನೇ ಪ್ರತಿವಾದಿಯ ಪರ ಶ್ರೀ ಎಸ್.ಪಿ.ಎಂ., ವಕೀಲರಿಂದಃ**

ನಾನು ಪಾಲು ವಿಂಗಡಣೆ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇದೆ. ನಾನು 12 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿ ನೋಡಿರುವುದಿಲ್ಲ. ಸದರಿ ಪ್ರತಿವಾದಿ ಸಲ್ಲಿಸಿರುವ ದಾಖಲೆಗಳನ್ನು ಕೂಡ ನಾನು ನೋಡಿರುವುದಿಲ್ಲ. ನಾನು ನಿಡಿ.1 ವಿಚಾರಣೆ ಸಮಯ ಹಿಂದಿನ ನ್ಯಾಯಾಲಯದಲ್ಲಿ ಸತ್ಯವನ್ನೇ ನುಡಿದಿರುತ್ತೇನೆ. ಸಾಕ್ಷಿ ಮುಂದುವರಿದು, ನಾನು ನುಡಿದ ಸಾಕ್ಷ್ಯದಲ್ಲಿ ಕೆಲವು ಅಂಶಗಳು ತಪ್ಪು ಇರಬಹುದು ಹಾಗೂ ಮಾರಾಟ ಮಾಡಲಾದ ಎಲ್ಲಾ ಆಸ್ತಿಗಳಲ್ಲೂ ನನಗೆ ಪಾಲು ಬೇಕು ಎನ್ನುತ್ತಾರೆ.

2. 12 ನೇ ಪ್ರತಿವಾದಿಯವರ ಪರವಾಗಿ ಸರ್ವೆ ನಂಬ್ರ-87/5 ಪಿ2, ವಿಸ್ತೀರ್ಣ 29 ಸೆಂಟ್ಸ್ ಅನ್ನು ಗಿರಿಜಾ ಶೆಟ್ಟಿಯವರು ಮಾರಾಟ ಮಾಡಿರುತ್ತಾರೆ ಎಂದರೆ, ನನಗೆ ಈ ದಾವೆ ಸಲ್ಲಿಸಿದ ನಂತರ ತಿಳಿಯಿತು ಎನ್ನುತ್ತಾರೆ. ಸದರಿ ಮಾರಾಟದ ಬಗ್ಗೆ ನನ್ನ ಆಕ್ಷೇಪಣೆಯನ್ನು ಈ ದಾವೆಯಲ್ಲೇ ಸಲ್ಲಿಸಿರುತ್ತೇನೆ. ಸದರಿ ಮಾರಾಟದ ಬಗ್ಗೆ ಬೇರೆ ಎಲ್ಲಾದರೂ ಕಾನೂನು ಕ್ರಮ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ, ದಾವೆ ಸಲ್ಲಿಸಿದ ನಂತರ ಮಾರಾಟದ ಬಗ್ಗೆ ತಿಳಿದು ಬಂತು ಎನ್ನುತ್ತಾರೆ. ಮಾರಾಟ ಮಾಡಿದ ಸ್ಥಳದಲ್ಲಿ 12 ನೇ ಪ್ರತಿವಾದಿ ಮನೆ ಹಾಗೂ ಕಾಂಪೌಂಡ್ ಕಟ್ಟಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ, ದಾವೆ ಸಲ್ಲಿಸಿದ ನಂತರವೇ ಕಟ್ಟಲಾಗಿದೆ ಎನ್ನುತ್ತಾರೆ. ಕ್ರಯವಾದ ದಿನಾಂಕದಿಂದಲೇ 12 ನೇ ಪ್ರತಿವಾದಿ ಮನೆ ಕಟ್ಟಿಕೊಂಡು ವಾಸವಾಗಿದ್ದಾನೆ ಎಂದರೆ ಸರಿಯಲ್ಲ. ಸದರಿ ಕ್ರಯ ಮಾಡುವ ಮೊದಲು ಸದರಿ ಆಸ್ತಿಯ ಪಹಣಿ ಪತ್ರಿಕೆ ಯಾರ ಹೆಸರಿನಲ್ಲಿ ಇತ್ತು

ಎಂದರೆ ಸಾಕ್ಷಿ, ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎನ್ನುತ್ತಾರೆ. ನಾನು 12 ನೇ ಪ್ರತಿವಾದಿಯ ಹೆಸರು ಕ್ರಯದ ನಂತರ ಪಹಣಿಯಲ್ಲಿ ನಮೂದು ಆದ ಬಗ್ಗೆ ಈ ದಾವೆ ಹೊರತುಪಡಿಸಿ ಬೇರೆ ಎಲ್ಲೂ ತಕರಾರು ಮಾಡಿಲ್ಲ.

3. ನನಗೆ ಸದರಿ ಮಾರಾಟವಾದ ಆಸ್ತಿಯಲ್ಲಿ ಪಾಲು ಬೇಕು. 12 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯಲ್ಲಿ ನನಗೆ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರು ಕಟ್ಟಿದ ಮನೆ, ಪಾಗಾರ ಹಾಗೂ ಬಾವಿಗೆ ನಾನು ಅಡ್ಡಿಪಡಿಸಿಲ್ಲ ಎಂದರೆ ಸಾಕ್ಷಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎನ್ನುತ್ತಾರೆ.

4. ದಾವಾ ಆಸ್ತಿಗಳು ಗಿರಿಜಾ ಶೆಟ್ಟಿಯವರಿಗೆ ಭೂ ನ್ಯಾಯ ಮಂಡಳಿಯಿಂದ ಸ್ವಂತ ನೆಲೆಯಲ್ಲಿ ಮಂಜೂರಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ, ಅದು ನನ್ನ ತಾಯಿಗೆ ಸೇರಿದ ಆಸ್ತಿ ಎನ್ನುತ್ತಾರೆ. 12 ನೇ ಪ್ರತಿವಾದಿಗೆ ತೊಂದರೆ ಮಾಡಲು ಹಾಗೂ ಆತನಿಂದ ಹಣವನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ನಿವೃತ್ತಿ 12 ನೇ ಪ್ರತಿವಾದಿಗೆ ಬಾಧಿಸುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಉಳಿದ ಪ್ರತಿವಾದಿಯರ ಪರ ವಕೀಲರು ಸಮಯಾವಕಾಶ ಕೋರಿದ್ದು, ಅಂತಿಮ ಅವಕಾಶವಾಗಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.